

# ಸಂಗೀತ ಕಲಿಕೆಗೆ ಹೊಸ ದಾರಿ

■ ಯು. ವೇಣೂರು

ಶಾಸ್ತ್ರೀಯ ಸಂಗೀತ ಕೇಳಿದರೆ ಮನಸ್ಸಿಗೆ ತಂಪು. ಏಕಾಗ್ರತೆ ಬೆಳೆಸಿಕೊಳ್ಳಲು, ಉನ್ಮಾದ, ಕೀಳರಿಮೆಯಂತಹ ಮಾನಸಿಕ ಸಮಸ್ಯೆ ಅಳಿಸಿಹಾಕಲು ಸಂಗೀತದಂಥ ಸಾಧನ ಬೇರೊಂದಿಲ್ಲ. ಇದನ್ನು ಕೇಳಿ ಆಸ್ವಾದಿಸುವುದಕ್ಕಿಂತ ಕಲಿತು ಆನಂದಿಸಿದರೆ ಇನ್ನೂ ಚೆನ್ನ ಅಲ್ಲವೇ? ನಿಮ್ಮ ಇಷ್ಟದ ಸಂಗೀತ ವಾದ್ಯ ಕಲಿಯಬೇಕೆಂಬ ಆಸೆ ಮೂಡಿತೇ? ಆದರೆ ಹೇಗೆ ಎಂಬ ಚಿಂತೆ ಕಾಡುತ್ತಿದೆಯೇ?

ನಿಮ್ಮ ಚಿಂತೆ ದೂರ ಮಾಡಿ ಇಂದಿನ ಕಾಲಕ್ಕೆ ಸೂಕ್ತವಾದ, ಕೊರೊನಾ ಭೀತಿಯಿಂದ ದೂರವಿರುವಂತೆ ಮಾಡಲು ಹೊಸ ಸಂಗೀತ ಆ್ಯಪ್ ಬಂದಿದೆ. ಇದರ ಮೂಲಕ ಭಾರತೀಯ ಶಾಸ್ತ್ರೀಯ ಸಂಗೀತವಿರಲಿ, ಪಾಶ್ಚಿಮಾತ್ಯ ಸಂಗೀತ ಇರಲಿ ಅಥವಾ ಯಾವುದೇ ಬಗೆಯ ಸಂಗೀತವನ್ನು ಕಲಿಯಲು ಸಾಧ್ಯ. ಇದಕ್ಕಾಗಿಯೇ ಬೆಂಗಳೂರು ಮೂಲದ 'ಗ್ಲೋಬಲ್ ಪರ್ಫಾರ್ಮಿಂಗ್ ಆರ್ಟ್ಸ್ ಅಕಾಡೆಮಿ (ಜಿಪಿಎ) ಅಭಿವೃದ್ಧಿಪಡಿಸಿದ 'ಒಕ್ಟಾವೆಝ್' ಎಂಬ ವಿನೂತನ ಆ್ಯಪ್ ಸಿದ್ಧವಾಗಿದೆ.

ಸಂಗೀತವನ್ನು ಹೊಸದಾಗಿ ಕಲಿಯುವವರು, ಸಂಗೀತದ ಬಗ್ಗೆ ಒಲವು ಇರುವವರು ಮತ್ತು ಆರಂಭಿಕ ಅಭ್ಯಾಸ ಮಾಡಿ ಬಿಟ್ಟು ಈಗ ಮತ್ತೆ ಕಲಿಯಬೇಕು ಎನಿಸುವವರಿಗೆ 'ಒಕ್ಟಾವೆಝ್ ವರ್ಚುವಲ್' ಉತ್ತಮ ವೇದಿಕೆ. ಇದು ಸಂಗೀತ ವಿದ್ವಾಂಸರು ಮತ್ತು ಸಂಗೀತ ವಿದ್ಯಾರ್ಥಿಗಳ ನಡುವೆ ಸೇತುವೆಯಂತೆ ಕೆಲಸ ಮಾಡುತ್ತದೆ. ನುರಿತ ಸಂಗೀತ ಮಾರ್ಗದರ್ಶಕರನ್ನು ಹೊಂದಿದ ಇದು, ಭಾರತೀಯ ಹಾಗೂ ಪಾಶ್ಚಮಾತ್ಯ ಶೈಲಿಯ ಸಂಗೀತ ಗಾಯನ ಮತ್ತು ವಾದ್ಯ ಸಂಗೀತ ಕೋರ್ಸ್‌ಗಳನ್ನು ಕೂಡಾ ಆಯೋಜಿಸುತ್ತಿದೆ.

ಈ ಆ್ಯಪ್ ಸಿದ್ಧಪಡಿಸಬೇಕು ಎಂಬ ಪರಿಕಲ್ಪನೆ ಬಂದದ್ದು ಸಂಗೀತಗಾರ ರವಿ ಕೃಷ್ಣಮೂರ್ತಿ ಅವರಿಗೆ. ಇದನ್ನು ಸಾಕಾರಗೊಳಿಸಿದ್ದು, ಮೃದಂಗ ವಿದ್ವಾಂಸ ಆನೂರು ಅನಂತಕೃಷ್ಣ ಶರ್ಮ, ಪ್ರವೀಣ್ ಡಿ.ರಾವ್, ಶ್ರೀನಿವಾಸಾಚಾರ್, ದಮ್ಮೂರ್, ಎನ್.ಎಸ್.ಪ್ರಸಾದ್, ಅರುಣ್ ಕುಮಾರ್, ಶದ್ರಚ್ ಸೊಲೊಮನ್, ಶ್ರೀನಿವಾಸ ಪ್ರಸಾದ್, ಮಧುಸೂಧನ, ಪ್ರಮಥ್ ಕಿರಣ್, ಸಂದೀಪ್ ವಶಿಷ್ಠ, ಮಂಗಳಾ ರವಿ, ವಾರಿಜಾಶ್ರೀ ಮತ್ತು ಎಂ.ಕೆ. ಓಹಿಲೇಶ್ವರಿ ಮುಂತಾದವರು. ಆಯಾ ಸಂಗೀತ ಪ್ರಕಾರ, ವಾದ್ಯ ಪ್ರಕಾರಗಳಲ್ಲಿ ಪರಿಣತರಾದವರ ಸಂಗೀತ ಮಾರ್ಗದರ್ಶನ, ಪಾಠ ಎಲ್ಲವೂ ಇಲ್ಲಿ ಲಭ್ಯ.

ಬರೀ ಸಂಗೀತ ಕಲಿಕೆ ಮಾತ್ರವಲ್ಲದೆ, ಅಗತ್ಯವಿರುವ ಸಂಗೀತ ಪರಿಕರಗಳು ಲಭ್ಯವಾಗುವುದರಿಂದ ಹಿಡಿದು, ಅವುಗಳಿಗೆ ವಿಮೆ ಮಾಡಿಸುವುದು, ಅವುಗಳ ನಿರ್ವಹಣೆಗೆ ವೇಳಾಪಟ್ಟಿ ನಿರ್ಧರಿಸುವುದು ಸಂಗೀತಜ್ಞರು ಮತ್ತು ಸಂಗೀತ ತಂಡಗಳಿಗೆ, ಸಂಗೀತ ಪರಿಕರಗಳನ್ನು ಬಾಡಿಗೆಗೆ ನೀಡುವುದು, ಉತ್ಸಾಹಿ ಕಲಿಕಾರ್ಥಿಗಳಿಗೆ ಅಗ್ರಗಣ್ಯ ಸಂಗೀತಜ್ಞರನ್ನು ಸಂಪರ್ಕಿಸುವುದು... ಇವೇ ಮುಂತಾದ ಸೇವೆಗಳೂ ಈ ಒಕ್ಟಾವೆಝ್ ಆ್ಯಪ್ ಮೂಲಕ ಲಭ್ಯ.



ಆನೂರು ಅನಂತಕೃಷ್ಣ ಶರ್ಮ



ಪ್ರವೀಣ್ ಡಿ. ರಾವ್



ಎನ್.ಎಸ್. ಪ್ರಸಾದ್

### ಗಾಯನ, ವಾದನ ಎರಡೂ...

ಒಕ್ಟಾವೆಝ್ ಆ್ಯಪ್ ಮೂಲಕ ಬರೀ ಗಾಯನ ಮಾತ್ರವಲ್ಲ, ಮೃದಂಗ, ಗಿಟಾರ್, ಕೀಬೋರ್ಡ್, ಕೊಳಲು ಮತ್ತು ತಬಲಾದಂಥ ವೈವಿಧ್ಯಮಯ ಸಂಗೀತ ವಾದ್ಯಗಳ ಕಲಿಕೆಯೂ ಸಾಧ್ಯ. ಜೊತೆಗೆ ಸುಗಮ ಸಂಗೀತವನ್ನೂ ಕಲಿಯಬಹುದು, ಕಲಿಕಾರ್ಥಿಗಳು ತಮ್ಮ ಮನೆಗಳಲ್ಲಿ ಆರಾಮವಾಗಿ ಕುಳಿತೇ ಸಂಗೀತ ಕಲಿಯಬಹುದು.

'ಕೆಲವು ಮಕ್ಕಳಿಗೆ, ಉದ್ಯೋಗಸ್ಥರಿಗೆ ಸಂಗೀತ ಕಲಿಯಬೇಕು ಎಂಬ ಆಸಕ್ತಿ ಇರುತ್ತದೆ. ಆದರೆ ಅವಕಾಶವಿರುವುದಿಲ್ಲ. ಸಮಯಹೊಂದಾಣಿಕೆಯೂ ಕಷ್ಟ. ಇಂಥವರಿಗೆ ಈ ಹೊಸ ಕಲಿಕಾ ವಿಧಾನ ಬಹಳ ಅನುಕೂಲಕರ. ಈ ಆ್ಯಪ್‌ನಲ್ಲಿ ಸುಮಾರು ಆರು ತಿಂಗಳಿಗೆ ಕಲಿಯುವಷ್ಟು ಸಂಗೀತ ಪಾಠಗಳನ್ನು ಸಿಲೆಬಸ್ ಪ್ರಕಾರ ಪರಿಣತರು, ವಿದ್ವಾಂಸರು ವಿಡಿಯೊ ಮಾಡಿ ಅಪ್‌ಲೋಡ್ ಮಾಡ್ತಾರೆ. ಹೊಸದಾಗಿ ಕಲಿಯುವವರು ಈ ವಿಡಿಯೊ ನೋಡಿ ಕಲಿತು ಅದನ್ನು ರೆಕಾರ್ಡ್ ಮಾಡಿ ಮತ್ತೆ ಅಲ್ಲೇ ಅಪ್‌ಲೋಡ್ ಮಾಡಬೇಕು. ಆಗ ಸಂಬಂಧಪಟ್ಟ ಗುರುಗಳು ಅದನ್ನು ನೋಡಿ ತಿದ್ದುಪಡಿ ಮಾಡುತ್ತಾರೆ. ಆರು ತಿಂಗಳಲ್ಲಿ ಒಂದೆರಡು ಬಾರಿ ಗುರುಗಳನ್ನು ಮುಖಾಮುಖಿಯಾದರೆ ಸಾಕು. ಸಾಕಷ್ಟು ಸಂಗೀತ ಜ್ಞಾನ ಪಡೆಯಬಹುದು' ಎನ್ನುತ್ತಾರೆ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್.

'ಸಂಗೀತದ ಆರಂಭಿಕ ಶಿಕ್ಷಣವನ್ನು ಇಲ್ಲಿ ಯಾರು ಬೇಕಾದರೂ ಕಲಿಯಬಹುದು. ಕೊರೊನಾ ಸಮಯದಲ್ಲಿ ಹೊರಗೆ ಹೋಗಿ ಕಲಿಯಲು ಕಷ್ಟವಾಗಿರುವುದರಿಂದ ಹಾಗೂ ತಮಗೆ ಬೇಕಾದ ಸಮಯದಲ್ಲಿ ಇದನ್ನು ಕಲಿಯಲು ಅನುಕೂಲವಾಗಿರುವುದರಿಂದ ಈ ಆ್ಯಪ್ ಬಹಳ ಪ್ರಯೋಜನ ಎನಿಸುತ್ತದೆ' ಎಂದು ಹೇಳುತ್ತಾರೆ ಪ್ರವೀಣ್ ಡಿ.ರಾವ್.

ವಿವರಗಳಿಗೆ <https://play.google.com/store/apps/details?id=octavez.gpaa.com&hl=en&gl=US>

ಮಾಹಿತಿಗೆ: 88613 89740